**IN THE COURT OF THE SENIOR CIVIL JUDGE AND JMFC, TIPTUR.**

**CC No. 202/2018**

**DW-1**

**Oath is Administered to the Witness on 13.10.2025**

| | | |
|---|---|---|
| **Witness Name** | **:** | **Sharanappa R.C** |
| **Father Name** | **:** | **Late Chandrashekharappa R.D** |
| **Age** | **:** | **58 Years** |
| **Occupation** | **:** | **Agriculturist** |
| **Address** | **:** | **Tiptur** |

**Chief examination by Sri. T.K.R counsel for accused.**

ನಾನು 2010 ರಿಂದ 2014 ರವರೆವಿಗೂ ಶ್ರೀ ಮುಕ್ಕಣ್ಣೇಶ್ವರಿ ಕೋಕನೇಟ್ ಇಂಡಸ್ಟ್ರೀಸ್ ಎನ್ನುವ ಕಾರ್ಖಾನೆ ನಡೆಸುತ್ತಿದ್ದೆ. ಅದು ನನ್ನ ಸ್ವಂತ ಉದ್ದಿಮೆ ಆಗಿತ್ತು. ಅದು ತಿಪಟೂರು ತಾಲ್ಲೂಕು ಹೊನ್ನವಳ್ಳಿ ಹೋಬಳಿ ಭೈರನಾಯಕನಹಳ್ಳಿ ಗ್ರಾಮದಲ್ಲಿ ಇತ್ತು. ತಿಪಟೂರು ನಗರದಿಂದ ಅದು 3 ಕಿ.ಮೀ ಅಂತರದಲ್ಲಿತ್ತು. ಅದನ್ನು ನಾನು 2014 ರಲ್ಲಿ ಮುಚ್ಚಿರುತ್ತೇನೆ. ನನ್ನ ಆರೋಗ್ಯ ಸಮಸ್ಯೆ ಇದ್ದ ಕಾರಣ ಆ ಉದ್ದಿಮೆಯನ್ನು ಮುಕ್ತಾಯಗೊಳಿಸಿರುತ್ತೇನೆ. ನನ್ನ ಹೆಂಡತಿ ಸರ್ಕಾರಿ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿದ್ದಾರೆ. ಅವರಿಗೆ ತಿಂಗಳಿಗೆ 60 ರಿಂದ 70 ಸಾವಿರ ಸಂಬಳ ಇದೆ. ಅವರ ಹೆಸರು ಸುಧಾಮಣಿ ಆಗಿದೆ. ನನ್ನ ಮಗ ಸಾಫ್ಟ್ ವೇರ್ ಇಂಜಿನಿಯರ್ ಆಗಿದ್ದಾನೆ. ಆತನಿಗೂ ಸಹ ತಿಂಗಳಿಗೆ 60-70 ಸಾವಿರ ಸಂಬಳ ಇದೆ. ಆತನ ಹೆಸರು ಯುಕ್ತಿಪ್ರಸಾದ್ ಎಸ್ ಆಗಿದೆ. ನನಗೆ 3 ವರೆ ಎಕರೆ ವ್ಯವಸಾಯದ ಜಮೀನು ಇದೆ ಮತ್ತು 1 ವರೆ ಎಕರೆ ಕಮರ್ಷಿಯಲ್ ಜಮೀನು ಇದೆ. ಅವೆರಡರ ಮಾರುಕಟ್ಟೆ ಬೆಲೆ ಸುಮಾರು 2 ರಿಂದ 3 ಕೋಟಿ ಇದೆ. ಆ ಜಮೀನಿಗೆ ಸಂಬಂಧಿಸಿದ ದಾಖಲಾತಿಗಳು ನನ್ನ ಬಳಿ ಇವೆ ಅದು ಈ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ.

ಪಿರ್ಯಾದಿ ನಾಗರಾಜು ರವರು ಎಪಿಎಂಪಿ ಯಾರ್ಡ್ ಕಛೇರಿಯಲ್ಲಿ ಪರಿಚಯ ಆಗಿದ್ದರು. ಅವರು ಮಣಕಿಕೆರೆ ಗ್ರಾಮದವರಾಗಿದ್ದು ಕೊಬ್ಬರಿ ವ್ಯಾಪಾರ ಮಾಡುತ್ತಿದ್ದರು. ಎಪಿಎಂಸಿ ಯಲ್ಲಿ ಆತನಿಗೆ ಸೇರಿದ ಮಹಾಲಕ್ಷ್ಮಿ ಎಂಬ ಹೆಸರಿನಲ್ಲಿ ಕೊಬ್ಬರಿ ಅಂಗಡಿ ಇತ್ತು. ನನಗೆ ಅಣ್ಣಯ್ಯಪ್ಪ ಎನ್ನುವವರು ಪಿರ್ಯಾದಿಯ ಪರಿಚಯ ತೆಂಗಿನ ಕಾಯಿ ವ್ಯಾಪಾರ ವಿಚಾರವಾಗಿ ಮಾಡಿಸಿಕೊಟ್ಟಿದ್ದರು. ಅಣ್ಣಯ್ಯಪ್ಪನವರು ನಮ್ಮ ಕಾರ್ಖಾನೆಗೆ ತೆಂಗಿನ ಕಾಯಿ ಸರಬರಾಜು ಮಾಡುತ್ತಿದ್ದರು ಮತ್ತು ಆ ವ್ಯವಹಾರಕ್ಕೆ ಸಂಬಂಧಿಸಿದಂತೆ ಭದ್ರತೆಗಾಗಿ ನನ್ನಿಂದ ಅವರು ಖಾಲಿ ಚೆಕ್ ನ್ನು ಅವರು ಪಡೆದಿದ್ದರು. ಡಿಸೆಂಬರ್ 2010 ರ ಮೊದಲನೇ ವಾರದಲ್ಲಿ ಅಣ್ಣಯ್ಯಪ್ಪನವರಿಗೆ ನಾನು ಆ ರೀತಿ ಚೆಕ್ ಕೊಟ್ಟಿದ್ದೆ. ಆ ಚೆಕ್ ನ್ನು ಪಿರ್ಯಾದಿಯು ಈ ಪ್ರಕರಣದಲ್ಲಿ ಹಾಜರು ಪಡಿಸಿರುತ್ತಾರೆ.

ನನಗೆ ಈ ನ್ಯಾಯಾಲಯದಿಂದ ಸಮನ್ಸ್ ಬಂದ ಬಳಿಕ 2018 ರಲ್ಲಿ ಈ ಪ್ರಕರಣದ ಬಗ್ಗೆ ಮಾಹಿತಿ ತಿಳಿದು ಬಂತು. ಅದಕ್ಕೂ ಮೊದಲು ನನಗೆ ಯಾವುದೇ ನೋಟೀಸು ಬಂದಿರಲಿಲ್ಲ. ನನಗೆ ನೋಟೀಸು ಜಾರಿ ಆಗಿದ್ದೇ ಆದಲ್ಲಿ ನಾನು ಎಸ್.ಬಿ.ಎಂ ಬ್ಯಾಂಕ್ ಎಸ್.ಬಿ.ಐ ನಲ್ಲಿ ವಿಲೀನಗೊಂಡಿರುವ ಕಾರಣ ಆ ಚೆಕ್ ಅಮಾನ್ಯವಾಗಿದೆ ಮತ್ತು ಆ ಚೆಕ್ ಅಣ್ಣಯ್ಯಪ್ಪನವರಿಗೆ ಕೊಟ್ಟಿದ್ದೆ ಎಂದು ಉತ್ತರ ನೋಟೀಸು ಕೊಡುತ್ತಿದ್ದೆ. ಅಣ್ಣಯ್ಯಪ್ಪ ಮತ್ತು ಪಿರ್ಯಾದಿಯ ನಡುವೆ ಹಣದ ವ್ಯವಹಾರ ಇರುವ ಬಗ್ಗೆ ನನಗೆ ತಿಳಿಸಿದ್ದರು. ಪಿರ್ಯಾದಿಗೆ 50 ಸಾವಿರ ರೂಪಾಯಿ ಹಣ ಪಡೆದು ಚೆಕ್ ಕೊಟ್ಟಿದ್ದೇನೆ ನೀವು ಏಕೆ ಕೊಡುವುದಿಲ್ಲ ಎಂದು ನನಗೆ ಅಣ್ಣಯ್ಯಪ್ಪ ಹೇಳಿದ್ದರು. ನನ್ನ ಮತ್ತು ಅಣ್ಣಯ್ಯನ ನಡುವೆ 2012 ರಲ್ಲಿಯೇ ವ್ಯವಹಾರ ಮುಕ್ತಾಯಗೊಂಡಿದೆ. ಪಿರ್ಯಾದಿಗೂ ಮತ್ತು ನನಗೂ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ. 50 ಸಾವಿರ ರೂಪಾಯಿ ಅಣ್ಣಯ್ಯಪ್ಪ ಪಿರ್ಯಾದಿಗೆ ಕೊಡುವುದು ಇತ್ತು ಮತ್ತು ನಾನು ಅಣ್ಣಯ್ಯಪ್ಪನಿಗೆ ಕೊಟ್ಟಂತಹ ಚೆಕ್ ನ್ನು ಪಿರ್ಯಾದಿಗೆ ಆತ ಕೊಟ್ಟು ದುರುಪಯೋಗ ಮಾಡಿಕೊಂಡಿದ್ದಾನೆ. ಪಿರ್ಯಾದಿಯು ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾನೆ.

**CC 202/2018** **DW-1**

**I am submitting the following documents.**

**Ex.D.1:-** Cheque book (Leaf No. 481733 to 481800)

**Ex.D.2:-** Aadhar card

**Ex.D.3 to 7:-** RTC's

**Further chief Examination: deferred on request.**

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR